ಪಿಡಬ್ಲ್ಯೂ -1 ಓ.ಎಸ್.ನಂ. 65/2017

ದಿನಾಂಕಃ 23-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಎನ್.ಎ.ಆರ್. ವಕೀಲರಿಂದಃ

ದೇವಪ್ಪ ಮತ್ತು ನರಸಿಂಹಪ್ಪ ಗಲಾಟೆ ಮಾಡಿದ್ದರಿಂದ ದಾವೆಯನ್ನು ಹಾಕಿರುತ್ತೇನೆ. ನನ್ನ ಮಗಳು ಮತ್ತು ಮಗ ಪೋಲೀಸ್ ಕೇಸನ್ನು ದಾಖಲು ಮಾಡಿರುತ್ತಾರೆ. ನಮ್ಮ ಜಮೀನಿನಲ್ಲಿ ಕಚ್ಚಾ ರಸ್ತೆ ಮಾಡುತ್ತಿರುವಾಗ ಪ್ರತಿವಾದಿಯರು ಬಂದು ಗಲಾಟೆ ಮಾಡಿದರು. ಯಾವ ತಾರೀಖು ಎಂದು ನನಗೆ ಗೊತ್ತಿರುವುದಿಲ್ಲ. ಆ ರಸ್ತೆಯನ್ನು ನಮ್ಮ ಜಮೀನಿಗೆ ಹೋಗುವುದಕ್ಕೆ ಮಾಡಿಕೊಳ್ಳುತ್ತಿದ್ದರು. 2 ನೇ ಪ್ರತಿವಾದಿಯ ಜಮೀನಿನ ಪಕ್ಕದಲ್ಲಿ ನಮ್ಮ ಜಮೀನಿಗೆ ಹೋಗಲು ರಸ್ತೆ ಮಾಡುತ್ತಿದ್ದರು. ನರಸಿಂಹಪ್ಪ ನಮ್ಮ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಇರುತ್ತಾರೆ. ಪಶ್ಚಿಮಕ್ಕೆ ಇರುವ 2 ನೇ ಪ್ರತಿವಾದಿಯ ಜಮೀನಿನ ಪಕ್ಕದಿಂದ ಪೂರ್ವಕ್ಕೆ ಇರುವ ನಮ್ಮ ಜಮೀನಿಗೆ ಹೋಗಲು ರಸ್ತೆ ಮಾಡಿರುತ್ತಾರೆ. ನಾವೇ ಜೆ ಸಿ ಬಿ ಯನ್ನು ತಂದು ರಸ್ತೆ ಮಾಡುತ್ತಿದ್ದೆವು. ಅಲ್ಲಿ ರಸ್ತೆಯನ್ನು ಮಾಡಲು ಯಾವುದೇ ರಸ್ತೆ ಇರಲಿಲ್ಲ. ಪ್ರತಿವಾದಿಯರ ಜಮೀನಿಗೆ ಹೋಗಲು ಮುಖ್ಯ ರಸ್ತೆ ಇದೆ. ಪ್ರತಿವಾದಿಯರ ಜಮೀನಿನಲ್ಲೆ ರಸ್ತೆ ಮಾಡಲು ಪ್ರಯತ್ನಿಸಿರುತ್ತೀರಿ ಎಂದರ ಸರಿಯಲ್ಲ. ಅವರ ಜಮೀನಿನ ನಂಬರ್ 97. ನನ್ನ ಜಮೀನಿನ ಸರ್ವೇ ನಂ. 97, 9 ಎಕರೆ 36 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನು ಸರ್ಕಾರದಿಂದ ನನಗೆ ಮತ್ತು ನನ್ನ ಗಂಡನಿಗೆ ಬಂದಿರುತ್ತದೆ. ನನ್ನ ಗಂಡನಿಗೆ 4 ಎಕರೆ 38 ಗುಂಟೆ ಬಂದಿದ್ದು, ನನಗೂ ಕೂಡ ನನಗೆ 4 ಎಕರೆ 38 ಗುಂಟೆ ಜಮೀನು ಬಂದಿರುತ್ತದೆ. ನನಗೆ ಗಂಡನಿಗೆ 77-78 ರಲ್ಲಿ ಜಮೀನು ಬಂದಿದ್ದು, ನನಗೂ ಕೂಡ 74-75 ರಲ್ಲಿ ಜಮೀನು ಬಂದಿರುತ್ತದೆ. ನನ್ನ ಗಂಡನಿಗೆ ಬಂದಿರುವ ಜಮೀನಿನ ಚೆಕ್ಕು ಬಂದಿಗೆ ಪೂರ್ವಕ್ಕೆ ಉಳಿಕೆ ಜಮೀನು , ಪಶ್ಚಿಮಕ್ಕೆ

ಉಳಿಕೆ ಜಮೀನು, ಉತ್ತರಕ್ಕೆ ತಿನಕಲ್ಲು ಗಡಿ, ದಕ್ಷಿಣಕ್ಕೆ ಗಜ್ಜಿಗೇನಹಳ್ಳಿ ನರಸಿಂಹಪ್ಪ ಇರುತ್ತಾರೆ. ನನಗೆ ಸರ್ಕಾರದಿಂದ ಬಂದಿರುವ ಜಮೀನಿಗೂ ಕೂಡ ನನ್ನ ಗಂಡನ ಜಮೀನಿಗೆ ಇರುವ ಚೆಕ್ಕು ಬಂದಿಯೇ ಇರುತ್ತದೆ. ಎರಡೂ ಜಮೀನಿಗೂ ಒಂದೇ ಚೆಕ್ಕು ಬಂದಿಗೆ ಯಾವ ದಾಖಲೆಯನ್ನು ನೀಡಿರುತ್ತೀರಿ ಎಂದರೆ ಸಾಕ್ಷಿಯು ನಾನು ದಾಖಲೆಯನ್ನು ಹಾಜರು ಪಡಿಸಿರುತ್ತೀನಿ. ನೀವು ಹೇಳುತ್ತಿರುವ ಚೆಕ್ಕು ಬಂದಿ ಇರುವುದಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.